All India Radio: Bangalore
National Bulletin In Kannada
29.04.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
****************

ಮುಖ್ಯಾಂಶಗಳು

1. ನವದೆಹಲಿಯಲ್ಲಿಂದು ಯುಗ್ಮ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ
2. ಭಾರತ-ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದ ಕುರಿತಂತೆ ಕೇಂದ್ರ ಸಚಿವ ಪಿಯೂಶ್ ಗೋಯಲ್, ಬ್ರಿಟನ್ ವ್ಯಾಪಾರ ಕಾರ್ಯದರ್ಶಿ ಸಭೆ
3. ಭಾರತದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಕಳೆದ ಮಾರ್ಚ್‌ನಲ್ಲಿ ಶೇಕಡ 3 ರಷ್ಟು ಏರಿಕೆ
4. ಐಪಿಎಲ್ ಟಿ-20 ಕ್ರಿಕೆಟ್ ; ಗುಜರಾತ್ ಟೈಟನ್ಸ್ ವಿರುದ್ಧ ರಾಜಸ್ಥಾನ್ ರಾಯಲ್ಸ್‌ಗೆ 8 ವಿಕೆಟ್ ಜಯ
5. ಮಹಿಳಾ ತ್ರಿಕೋನ ಕ್ರಿಕೆಟ್ ಸರಣಿ; ಇಂದು ಭಾರತ - ದಕ್ಷಿಣ ಆಫ್ರಿಕಾ ಹಣಾಹಣಿ

****************

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಭಾರತ್ ಮಂಟಪದಲ್ಲಿ ನಡೆಯಲಿರುವ ಯುಗ್ಮ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಸಂಸ್ಕೃತದಲ್ಲಿ ಸಂಗಮ ಎಂಬ ಅರ್ಥವನ್ನು ನೀಡುವ ಈ ಸಮಾವೇಶ, ಸರ್ಕಾರ, ಶೈಕ್ಷಣಿಕ, ಕೈಗಾರಿಕೆ ಮತ್ತು ನಾವೀನ್ಯಕಾರರ ನಾಯಕರನ್ನು ಒಂದೇ ವೇದಿಕೆಯಡಿ ಒಟ್ಟುಗೂಡಿಸುವ ಮೊದಲ ಕಾರ್ಯತಂತ್ರದ ಸಮಾವೇಶವಾಗಿದೆ.

ವಾಧ್ವನಿ ಪ್ರತಿಷ್ಠಾನ ಮತ್ತು ಸರ್ಕಾರಿ ಸಂಸ್ಥೆಗಳ ಸುಮಾರು ಒಂದು ಸಾವಿರ 400 ಕೋಟಿ ರೂಪಾಯಿಗಳ ಜಂಟಿ ಹೂಡಿಕೆಯೊಂದಿಗೆ ನಡೆಯುವ ಈ ಸಮಾವೇಶ, ದೇಶದ ನಾವೀನ್ಯತೆಯ ಪಯಣಕ್ಕೆ ಕೊಡುಗೆ ನೀಡಲಿದೆ.

ದೇಶದ ನಾವೀನ್ಯತೆ ಪರಿಸರ ವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದ ಖಾಸಗಿ ಹೂಡಿಕೆಯನ್ನು ವೇಗಗೊಳಿಸಲು, ಶೈಕ್ಷಣಿಕ-ಉದ್ಯಮ-ಸರ್ಕಾರಿ ಪಾಲುದಾರಿಕೆಗಳನ್ನು ಬಲಪಡಿಸಲು ಮತ್ತು ವಿಕಸಿತ ಭಾರತದ ದೃಷ್ಟಿಕೋನಕ್ಕೆ ಅನುಗುಣವಾಗಿ ನಾವೀನ್ಯತೆಗೆ ವೇಗ ನೀಡಲು ಸಮಾವೇಶ ಗುರಿ ಹೊಂದಿದೆ. ಸ್ವಾವಲಂಬಿ ಮತ್ತು ನಾವೀನ್ಯತೆ-ನೇತೃತ್ವದ ಭಾರತದ ಪ್ರಧಾನ ಮಂತ್ರಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿ, ಸಮಾವೇಶದ ಸಮಯದಲ್ಲಿ ವಿವಿಧ ಪ್ರಮುಖ ಯೋಜನೆಗಳಿಗೆ ಚಾಲನೆ ನೀಡಲಾಗುವುದು. ಸಮಾವೇಶ ಸರ್ಕಾರಿ ಅಧಿಕಾರಿಗಳು, ಉನ್ನತ ಕೈಗಾರಿಕೆ ಮತ್ತು ಶೈಕ್ಷಣಿಕ ಕ್ಷೇತ್ರದ ಗಣ್ಯರನ್ನು ಒಳಗೊಂಡ ಉನ್ನತ ಮಟ್ಟದ ದುಂಡುಮೇಜಿನ ಸಭೆಗಳು ಮತ್ತು ಚರ್ಚೆಗಳನ್ನು ಒಳಗೊಂಡಿರಲಿದೆ.

****************

ಭಾರತ-ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಕುರಿತ ಮಾತುಕತೆಗಳನ್ನು ಮುಂದುವರೆಸಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಲಂಡನ್‌ನಲ್ಲಿ ನಿನ್ನೆ ಬ್ರಿಟನ್ ವ್ಯಾಪಾರ ಕಾರ್ಯದರ್ಶಿ ಜೊನೆಥನ್ ರೆನಾಲ್ಡ್ಸ್ ಅವರನ್ನು ಭೇಟಿಯಾದರು.

ಹೂಡಿಕೆಯ ಸಂಬಂಧಗಳು ಮತ್ತು ದ್ವಿಪಕ್ಷೀಯ ವ್ಯಾಪಾರ ಬಲಪಡಿಸುವ ಗುರಿಯೊಂದಿಗೆ ಬ್ರಿಟನ್ ಕಾರ್ಯದರ್ಶಿಗಳೊಂದಿಗೆ ಮಾತುಕತೆ ನಡೆಸಲು ಸಚಿವ ಪಿಯೂಶ್ ಗೋಯಲ್ ಲಂಡನ್‌ಗೆ ಎರಡು ದಿನಗಳಿಗಾಗಿ ತೆರಳಿದ್ದಾರೆ.

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆಗಳನ್ನು ಪುನರಾರಂಭಿಸಲಾಗುತ್ತಿದೆ. ಉಭಯ ರಾಷ್ಟ್ರಗಳು ಒಪ್ಪಂದವನ್ನು ಮುಂದಕ್ಕೆ ಕೊಂಡೊಯ್ಯಲು ಬದ್ಧರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣದೀರ್ ಜೈಸ್ವಾಲ್ ಹೇಳಿದ್ದಾರೆ.

****************

ಭಾರತದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಕಳೆದ ಮಾರ್ಚ್‌ನಲ್ಲಿ ಶೇಕಡ 3 ರಷ್ಟು ಏರಿಕೆ ದಾಖಲಿಸಿದೆ,

ಕೈಗಾರಿಕಾ ಉತ್ಪಾದನಾ ಸೂಚ್ಯಂಕ– ಐಐಪಿ ಪ್ರಕಾರ, ಫೆಬ್ರವರಿಯಲ್ಲಿ ಪರಿಷ್ಕೃತ ಬೆಳವಣಿಗೆಯ ದರ ಶೇಕಡ 2.7 ರಷ್ಟಿತ್ತು. ಕೇಂದ್ರ ಅಂಕಿಅಂಶಗಳು ಮತ್ತು ಯೋಜನಾನುಷ್ಠಾನ ಸಚಿವಾಲಯ ಬಿಡುಗಡೆಗೊಳಿಸಿರುವ ಅಂಕಿಅಂಶಗಳ ಪ್ರಕಾರ, ಐಐಪಿಯ ಮೂರು ಪ್ರಮುಖ ಅಂಶಗಳಲ್ಲಿ, ವಿದ್ಯುತ್ ಉತ್ಪಾದನೆ ಶೇಕಡ 6.3 ರಷ್ಟು, ಉತ್ಪಾದನೆ ಶೇಕಡ 3 ರಷ್ಟು ಬೆಳವಣಿಗೆ ಕಂಡರೆ, ಗಣಿಗಾರಿಕೆ ಚಟುವಟಿಕೆಗಳು ಮಾರ್ಚ್‌ನಲ್ಲಿ ಹಿಂದಿನ ತಿಂಗಳಿಗೆ ಹೋಲಿಸಿದರೆ ನಿಧಾನಗತಿಯಲ್ಲಿ ಶೇಕಡ 0.4 ರಷ್ಟು ಹೆಚ್ಚಾಗಿದೆ.

ಬಳಕೆ ಆಧಾರಿತ ವರ್ಗೀಕರಣದ ಪ್ರಕಾರ ಐಐಪಿಯ ಅನುಗುಣವಾದ ಬೆಳವಣಿಗೆಯ ದರಗಳು ಮಾರ್ಚ್ 2024 ಕ್ಕೆ ಹೋಲಿಸಿದರೆ ಮಾರ್ಚ್ 2025 ರಲ್ಲಿ ಪ್ರಾಥಮಿಕ ಸರಕುಗಳಲ್ಲಿ ಶೇಕಡ 3.1 ರಷ್ಟು, ಬಂಡವಾಳ ಸರಕುಗಳಲ್ಲಿ ಶೇಕಡ 2.4 ರಷ್ಟು, ಮಧ್ಯಂತರ ಸರಕುಗಳಲ್ಲಿ ಶೇಕಡ 2.3 ರಷ್ಟು, ಮೂಲಸೌಕರ್ಯ ಅಥವಾ ನಿರ್ಮಾಣ ಸರಕುಗಳಲ್ಲಿ ಶೇಕಡ 8.8 ರಷ್ಟು ಕೈಗಾರಿಕಾ ಉತ್ಪಾದನಾ ಸೂಚ್ಯಂಕ ದರ ದಾಖಲಿಸಿದೆ.

****************

ವಿವಿಧ ಅಂಶಗಳನ್ನು ಮತ್ತು ಏಕೀಕೃತ ಪಾವತಿ ಇಂಟರ್ಫೇಸ್ –ಯುಪಿಐ ಪರಿಸರ ವ್ಯವಸ್ಥೆಯ ಮುಂದಿನ ಮಾರ್ಗವನ್ನು ಪರಿಶೀಲಿಸಲು ನವದೆಹಲಿಯಲ್ಲಿ ನಿನ್ನೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಭೆ ನಡೆಸಿದರು. ಮುಂದಿನ ಎರಡು ಮೂರು ವರ್ಷಗಳಲ್ಲಿ ದಿನಕ್ಕೆ ಒಂದು ಬಿಲಿಯನ್ ಯುಪಿಐ ವಹಿವಾಟುಗಳ ಗುರಿಯನ್ನು ಸಾಧಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಪರಸ್ಪರ ಕಾರ್ಯಸಾಧ್ಯ ಚೌಕಟ್ಟುಗಳ ಅಭಿವೃದ್ಧಿಯೊಂದಿಗೆ ಯುಪಿಐ ನ ಅಂತಾರಾಷ್ಟ್ರೀಕರಣವನ್ನು ವೇಗಗೊಳಿಸುವ ಮಹತ್ವವನ್ನು ಅವರು ಪ್ರಸ್ತಾಪಿಸಿದ್ದಾರೆ. ಸಭೆಯಲ್ಲಿ ಹಣಕಾಸು ಸಚಿವಾಲಯ, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತೀಯ ರಾಷ್ಟ್ರೀಯ ಪಾವತಿ ನಿಗಮದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಯುಪಿಐ ವೇದಿಕೆಯ ವ್ಯಾಪ್ತಿ ಮತ್ತು ಪರಿಣಾಮವನ್ನು ವಿಸ್ತರಿಸಲು ಹೆಚ್ಚಿನ ಬಳಕೆದಾರರು ಮತ್ತು ವ್ಯಾಪಾರಿಗಳನ್ನು ಸೇರಿಸುವ ಪ್ರಯತ್ನಗಳನ್ನು ತೀವ್ರಗೊಳಿಸುವಂತೆ ಹಣಕಾಸು ಸಚಿವರು ಅಧಿಕಾರಿಗಳಿಗೆ ಕರೆ ನೀಡಿದರು. ಮೂಲಸೌಕರ್ಯ ಅಂತರವನ್ನು ಪರಿಹರಿಸಲು, ಅಂತಿಮ ಬಳಕೆದಾರರ ಅನುಭವವನ್ನು ಹೆಚ್ಚಿಸಲು ಮತ್ತು ಸೈಬರ್ ಭದ್ರತಾ ವ್ಯವಸ್ಥೆಯನ್ನು ಸುಧಾರಿಸಲು ಎಲ್ಲರ

ಸಹಯೋಗದೊಂದಿಗೆ ಕಾರ್ಯನಿರ್ವಹಿಸುವಂತೆ ಅವರು ತಿಳಿಸಿದರು. ಯುಪಿಐ ನ ದೃಢತೆಯನ್ನು ಬಲಪಡಿಸಲು ಮತ್ತು ಭವಿಷ್ಯದ ಅಡೆತಡೆಗಳನ್ನು ತಡೆಯಲು ಕೇಂದ್ರ ಹಣಕಾಸು ಸಚಿವರು ಭಾರತೀಯ ರಾಷ್ಟ್ರೀಯ ಪಾವತಿ ನಿಗಮಕ್ಕೆ ನಿರ್ದೇಶನ ನೀಡಿದರು.

ಹಣಕಾಸು ಸಚಿವಾಲಯದ ಪ್ರಕಾರ, ಯುಪಿಐ ಗಮನಾರ್ಹ ಬೆಳವಣಿಗೆಯನ್ನು ಕಾಣುತ್ತಿದೆ. 2019–20 ರಿಂದ 2024–25 ರ ಹಣಕಾಸು ವರ್ಷದಿಂದ, ಯುಪಿಐ ವಹಿವಾಟುಗಳು ಶೇಕಡಾ 72 ರಷ್ಟು ವಾರ್ಷಿಕ ಬೆಳವಣಿಗೆಯ ದರವನ್ನು ದಾಖಲಿಸಿವೆ. 2021–22 ಮತ್ತು 2024–25ರ ಹಣಕಾಸು ವರ್ಷಗಳ ನಡುವೆ ಸುಮಾರು 26 ಕೋಟಿ ಹೊಸ ಬಳಕೆದಾರರು ಮತ್ತು 5.5 ಕೋಟಿ ಹೊಸ ವ್ಯಾಪಾರಿಗಳು ಯುಪಿಐ ಪ್ಲಾಟ್‌ಫಾರ್ಮ್‌ಗೆ ಯಶಸ್ವಿಯಾಗಿ ಸೇರ್ಪಡೆಗೊಂಡಿದ್ದಾರೆ. ಯುಪಿಐ ಈಗ ಸುಮಾರು 45 ಕೋಟಿ ಸಕ್ರಿಯ ಬಳಕೆದಾರರನ್ನು ಹೊಂದಿದೆ. ಕಳೆದ ಹಣಕಾಸು ವರ್ಷದಲ್ಲಿ, ಯುಪಿಐ ವಹಿವಾಟುಗಳು 261 ಲಕ್ಷ ಕೋಟಿ ರೂಪಾಯಿಗಳಾಗಿದ್ದು, ವರ್ಷದಿಂದ ವರ್ಷಕ್ಕೆ ಶೇ. 30 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

****************

ವೇವ್ಸ್ 2025 ಆಯೋಜಿಸುತ್ತಿರುವುದು ಮಹಾರಾಷ್ಟ್ರದ ಪಾಲಿಗೆ ಹೆಮ್ಮೆಯ ವಿಷಯವಾಗಿದ್ದು, ಮೆ 1 ರಿಂದ 4ರವರೆಗೆ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮನವಿ ಮಾಡಿದ್ದಾರೆ.

ಜಾಗತಿಕ ವೇದಿಕೆಯಲ್ಲಿ ಭಾರತದ ಸೃಜನಶೀಲತೆಯ ಉತ್ಕೃಷ್ಟತೆಯನ್ನು ಪ್ರದರ್ಶಿಸಲು ವೇವ್ಸ್ ಒಂದು ಉತ್ತಮ ಅವಕಾಶ ಒದಗಿಸುತ್ತದೆ. ಉದ್ಯೋಗವಕಾಶಗಳನ್ನು ಸೃಷ್ಟಿಸುವಲ್ಲಿ ಸೃಜನಶೀಲ ಆರ್ಥಿಕತೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಹೇಳಿದರು.

ಧ್ವನಿ: ದೇವೇಂದ್ರ ಫಡ್ನವೀಸ್

****************

ಸರ್ಕಾರಿ ಕೆಲಸಗಳಲ್ಲಿ ಹಿಂದಿ ಭಾಷೆಯನ್ನು ಉತ್ತೇಜಿಸುವುದು ಕೇವಲ ಕೆಲವು ಇಲಾಖೆಗಳ ಜವಾಬ್ದಾರಿಯಲ್ಲ, ಬದಲಾಗಿ ಇಡೀ ಸಮಾಜದ ಸಾಮೂಹಿಕ ಕರ್ತವ್ಯ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ನಿನ್ನೆ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ ಆಯೋಜಿಸಿದ್ದ 'ಹಿಂದಿ ಸಲಹ್ಕಾರ್' ಸಮಿತಿಯ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು ಈ ಹೇಳಿಕೆಗಳನ್ನು ನೀಡಿದರು.

****************

ನಾಳೆ ಆರಂಭವಾಗಲಿರುವ ಚಾರ್ ಧಾಮ್ ಯಾತ್ರೆ 2025 ರ ವ್ಯವಸ್ಥೆಗಳನ್ನು ಪರಿಶೀಲಿಸಲು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಾಜ್ಯಾದ್ಯಂತ ಜಿಲ್ಲಾ ನ್ಯಾಯಾಧೀಶರೊಂದಿಗೆ ಸಭೆ ನಡೆಸಿದರು.

ಮೇ 2 ರಿಂದ ಕೇದಾರನಾಥದಲ್ಲಿ ಭಕ್ತರಿಗೆ ಕೇದಾರೇಶ್ವರನ ದರ್ಶನ ಪಡೆಯಲು ಸಾಧ್ಯವಾಗುತ್ತದೆ ಎಂದು ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಚಾರ್ ಧಾಮ್ ಯಾತ್ರೆ 2025 ರ ನೋಂದಣಿ ನಿನ್ನೆಯಿಂದ ಪ್ರಾರಂಭವಾಯಿತು. ವಿಶೇಷ ಚೇತನರು, ಹಿರಿಯ ನಾಗರಿಕರು ಮತ್ತು ವಿದೇಶಿ ಪ್ರಜೆಗಳಿಗಾಗಿ ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸಲಾಗುತ್ತಿದೆ.

****************

ದಿವಂಗತ ಪೋಪ್ ಫ್ರಾನ್ಸಿಸ್ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ರಹಸ್ಯ ಸಮಾವೇಶ ಮುಂದಿನ ತಿಂಗಳ 7 ರಂದು ಆರಂಭವಾಗಲಿದೆ ಎಂದು ವ್ಯಾಟಿಕನ್ ಘೋಷಿಸಿದೆ.

ಏಪ್ರಿಲ್ 21 ರಂದು ಪೋಪ್ ಫ್ರಾನ್ಸಿಸ್ ನಿಧನದ ನಂತರ ನಡೆದ ಕಾರ್ಡಿನಲ್ಸ್ ಸಭೆಯ ಅಧಿವೇಶನದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಂಪ್ರದಾಯದಂತೆ ಮತದಾನ ಸಿಸ್ಟೀನ್ ಚಾಪೆಲ್‌ನಲ್ಲಿ ನಡೆಯಲಿದ್ದು, ಇದಕ್ಕಾಗಿ ಸಿದ್ಧತೆ ನಡೆಸಲು ಸಿಸ್ಟೀನ್ ಚಾಪೆಲ್ ಅನ್ನು ನಿನ್ನೆ ಪ್ರವಾಸಿಗರಿಗೆ ಮುಚ್ಚಲಾಗಿತ್ತು.

****************

ಆಂಧ್ರಪ್ರದೇಶದಿಂದ ರಾಜ್ಯಸಭೆಗೆ ನಡೆಯಲಿರುವ ಉಪಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಪಾಕ ವೆಂಕಟಸತ್ಯನಾರಾಯಣ ಅವರ ಹೆಸರನ್ನು ಘೋಷಿಸಿದೆ. ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯು ನಿನ್ನೆ ಅಭ್ಯರ್ಥಿಯ ಹೆಸರನ್ನು ಅಂತಿಮಗೊಳಿಸಿದೆ.

****************

ಜೈಪುರದ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ರಾಜಸ್ಥಾನ್ ರಾಯಲ್ಸ್ ತಂಡ 8 ವಿಕೆಟ್‌ಗಳ ಜಯ ದಾಖಲಿಸಿದೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಗುಜರಾತ್ ತಂಡ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಪ್ರತ್ಯುತ್ತರವಾಗಿ ಈ ಬೃಹತ್ ಮೊತ್ತ ಬೆನ್ನತ್ತಿದ ರಾಜಸ್ಥಾನ ತಂಡ ಕೇವಲ 15.5 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212 ಗೆಲುವು ತನ್ನದಾಗಿಸಿಕೊಂಡಿದ್ದು, ರಾಜಸ್ಥಾನ್ ಪರ 14 ವರ್ಷದ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ಕೇವಲ 38 ಎಸೆತೆಗಳಲ್ಲಿ 101 ರನ್ ಗಳಿಸಿ ರಾಜಸ್ಥಾನ್ ತಂಡ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

****************

ಇಂದು ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿರುವ ಮಹಿಳಾ ತ್ರಿಕೋನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ. ಈ ಪಂದ್ಯವು ಭಾರತೀಯ ಕಾಲಮಾನ ಬೆಳಿಗ್ಗೆ 10 ಗಂಟೆಗೆ ಆರಂಭವಾಗಲಿದೆ.

***************